ದಿನಾಂಕ : 13-06-2024 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು: 1 ಮತ್ತು 2 ನೇ ಆರೋಪಿತರ ಪರವಾಗಿ ಶ್ರೀ. ಬಿ.ಜೆ.ಜೆ. ವಕೀಲರಿಂದ ಹಾಗೂ ಇತರೆ ಆರೋಪಿತರ ಪರವಾಗಿ ಶ್ರೀ ಎ.ಬಿ.ಬಿ .ವಕೀಲರಿಂದ**

ನಾನು ವಿದ್ಯಾಭಾಸ ಮಾಡಿರುವುದಿಲ್ಲ. ಗಾವಟಾನ ಯಾರ ಹೆಸರಿನಲ್ಲಿರುತ್ತದೆ ಎಂಬುದು ನನಗೆ ಗೊತ್ತಿಲ್ಲ. ಪಟ್ಟಣ ಪಂಚಾಯತಿಯ ಗಾವಟಾನ ಜಾಗದಲ್ಲಿ ಯಾರಿಗಾದರೂ ಕಟ್ಟಡ ಕಟ್ಟಲು ಅನುಮತಿ ಕೊಟ್ಟ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ರಾವಸಾಬ ಬಾಬಣ್ಣವರ ನೀಡಿದ ಪಿರ್ಯಾದಿಯಲ್ಲಿ ನಾನು 4 ನೇ ಆರೋಪಿಯಾಗಿರುತ್ತೇನೆ. ಗಾವಟಾನ ಜಾಗವು ನಮಗೆ ಹತ್ತಿರ ಇದೆ ಅದನ್ನು ನಮಗೆ ಕೊಡಬೇಕೆಂದು ಅರ್ಜಿ ಕೊಟ್ಟ ಬಗ್ಗೆ ನನಗೆ ಗೊತ್ತಿಲ್ಲ. ಗಾವಟಾನ ಜಾಗದಲ್ಲಿ ಪಾಯ ತೆಗೆದು ಮನೆ ಕಟ್ಟಲು ಅಡಿಪಾಯ ಹಾಕಿದ ನಂತರ ಈ ಜಗಳ ಶುರುವಾಯಿತು ಎಂದರೆ ಸರಿ. ಸದರಿ ಜಾಗದ ಸುತ್ತ ಕಲ್ಲು ಮತ್ತು ಕಲ್ಲುಕುಟ್ಟರಿ ಇರುತ್ತವೆ ಎಂದರೆ ಸರಿ. ಗಾವಟಾನ ಜಾಗಕ್ಕೆ ಹಚ್ಚಿ ನನ್ನ ಅಣ್ಣನ ಮನೆ ಇರುತ್ತದೆ ಆದರೆ ಅದರ ಸಂಖ್ಯೆ ನನಗೆ ಗೊತ್ತಿಲ್ಲ. ಆರೋಪಿತರು ಗಾವಟಾನ ಜಾಗದಲ್ಲಿ ಮನೆ ಕಟ್ಟುತ್ತಿದ್ದು, ಆದ ಕಾರಣ ಪಟ್ಟಣ ಪಂಚಾಯತಿಗೆ ಅರ್ಜಿ ಸಲ್ಲಿಸಿದ್ದು, ಆಗ ಪಂಚಾಯತಿಯವರು ಸದರಿ ಜಾಗಕ್ಕೆ ಬಂದು ಪರಿಶೀಲಿಸಿರುತ್ತಾರೆ ಎಂದರೆ ಸರಿ.

2. ಇವತ್ತಿನವರೆಗೂ ನಾನಾಗಲೀ, ನನ್ನ ಅಣ್ಣನಾಗಲೀ ಬಾಬಣ್ಣವರ ಕುಟುಂಬದ ವಿರುದ್ಧ ವೈಯಕ್ತಿಕವಾಗಿ ಯಾವುದೇ ದೂರನ್ನು ಸಲ್ಲಿಸಿರುವುದಿಲ್ಲ. ಭೂಕಬಳಿಕೆ ನ್ಯಾಯಾಲಯದ ಮುಂದೆ ಆರೋಪಿತರು ಅಕ್ರಮವಾಗಿ ಸರ್ಕಾರಿ ಜಮೀನನ್ನು ಒತ್ತುವರಿ ಮಾಡಿರುತ್ತಾರೆ ಎಂದು ದೂರು ಸಲ್ಲಿಸಿದ್ದು, ಅದರಲ್ಲಿ ನಮ್ಮ ಜವಾಬ ಆಗಿ ಸದರಿ ಪ್ರಕರಣವು ವಿಲೇವಾರಿ ಆಗಿರುತ್ತದೆ ಎನ್ನುವ ವಕೀಲರ ಪ್ರಶ್ನೆಗೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಪ್ರಕಾಶ ಇತನು ಕಲ್ಲುಕುಟ್ಟರಿ ಮೇಲಿಂದ ಕೆಳಗೆ ಬಿದ್ದಿದ್ದು, ಆಗ ನಾವು ಆತನನ್ನು ಎಬ್ಬಿಸಲು ಹೋಗಿದ್ದೇವು ಎಂದರೆ ಸರಿ. ಅದೇ ರೀತಿ ಕಬ್ಬಿಣದ ಚಡಿ ಮತ್ತು ಬಂಬನ್ನು ತೆಗೆದುಕೊಂಡು ಹೊಡೆಯುತ್ತಿದ್ದರು, ನನಗೆ

ಸುರೇಂದ್ರ ಬಾಬಣ್ಣವರ ಕಲ್ಲಿನಿಂದ ಎಡಗೈಗೆ ಒಗೆದರು, ಆರೋಪಿಯಾದ ರಾವಸಾಬನ ಕೈಯಲ್ಲಿ ಬಂಬು ಬಡಿಗೆ ನೇಮಿನಾಥ ಇತನ ಕೈಯಲ್ಲಿ ಕಬ್ಬಿಣದ ಚಡಿ ಇತ್ತು, ಶ್ರೀಕಾಂತ ಇತನ ಕೈಯಲ್ಲಿ ಕಲ್ಲು ಇತ್ತು, ಅಜಿತ ಇತನ ಕೈಯಲ್ಲಿ ಕಬ್ಬಿಣದ ಚಡಿ ಇತ್ತು, ಸುರೇಂದ್ರನ ಕೈಯಲ್ಲಿ ಕಲ್ಲು ಇತ್ತು, ಆ ದಿನ ಅಲ್ಲಿ ಹಾಜರಿದ್ದಂತಹ 300-400 ಜನ ಸೇರಿ ನಮ್ಮ ಮೇಲೆ ಹಲ್ಲೆ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ಈ ನ್ಯಾಯಾಲಯದಲ್ಲಿ ಮೊದಲನೇ ಬಾರಿಗೆ ಸಾಕ್ಷಿ ಹೇಳಿರುತ್ತೇನೆ ಅದಕ್ಕಿಂತ ಮುಂಚೆ ಪೋಲಿಸರ ನನ್ನ ಜವಾಬನ್ನು ತೆಗೆದುಕೊಂಡಿರುವುದಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಯಾವುದೇ ಘಟನೆ ಆಗಿಲ್ಲ ಎಂದರೆ ಸರಿಯಲ್ಲ. ನಾನು ಈ ಮುಂಚೆ ಈ ನ್ಯಾಯಾಲಯಕ್ಕೆ ಸಾಕ್ಷಿ ನುಡಿಯಲು ಬಂದಾಗ ಪೋಲಿಸರು ನ್ಯಾಯಾಲಯದಲ್ಲಿ ಇದೇ ತರಹ ಹೇಳಬೇಕೆಂದು ಹೇಳಿದ್ದರಿಂದ ಅವರ ಮಾತು ಕೇಳಿ ನ್ಯಾಯಾಲಯದ ಮುಂದೆ ಸಾಕ್ಷಿ ಹೇಳಿರುತ್ತೇನೆ ಎಂದರೆ ಸರಿಯಲ್ಲ. ಬಾಬಣ್ಣವರು ಹಾಗೂ ಇತರರಿಗೆ ನಾವು ಕಲ್ಲು ಒಗೆದು ಅವರಿಗೆ ಗಾಯಪಡಿಸಿದ್ದರಿಂದ ಅವರು ಚಿಕಿತ್ಸೆ ಪಡೆದು ಆಸ್ಪತ್ರೆಗೆ ಹೋಗಿದ್ದು ಅವರು ನಮ್ಮ ಮೇಲೆ ದೂರು ದಾಖಲಿಸುತ್ತಾರೆ ಅದರಿಂದ ನಮಗೆ ತೊಂದರೆ ಆಗುತ್ತದೆ ಎಂದು ತಿಳಿದು ಆರೋಪಿತರ ವಿರುದ್ಧ ಒಂದು ಸುಳ್ಳು ದೂರನ್ನು ಸಲ್ಲಿಸಿ ಈ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

4. ಗಾವಟಾನ ಜಾಗದಲ್ಲಿ ಕಬ್ಬಣದ ಚಡಿ, ಕಲ್ಲುಗಳು ಮತ್ತು ಬಂಬು ಬಡಿಗೆಗಳು ಇದ್ದವು ಎಂದರೆ ಸರಿ. ನನಗೆ ರಕ್ತಗಾಯ ಆಗಿರುವುದಿಲ್ಲ ಆದರೆ ಒಳಪೆಟ್ಟು ಆಗಿರುತ್ತದೆ. ನಾನು ಮತ್ತು ಇತರ ಸಾಕ್ಷಿದಾರರು ಸೇರಿ ಒಂದು ಖೊಟ್ಟಿ ದೂರು ನೀಡಿ ಆರೋಪಿತರು ವಿರುದ್ಧ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದಿರುವ ಎಮ್.ಓ 1 ರಿಂದ 5 ನ್ನು ತೆಗೆದುಕೊಂಡು ಆರೋಪಿತರು ನಮ್ಮ ಮೇಲೆ ಹಲ್ಲೆ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

**<u>ಪಾಟೀ ಸವಾಲು: 3 ರಿಂದ 9, 11 ರಿಂದ 14, 16 ರಿಂದ 20, 22 ರಿಂದ 28, 31 ರಿಂದ 34 ನೇ ಆರೋಪಿತರ ಪರವಾಗಿ ಶ್ರೀ ಎ.ಬಿ.ಬಿ .ವಕೀಲರಿಂದ</u>**

1 ಮತ್ತು 2 ನೇ ಆರೋಪಿತರ ಪರ ವಕೀಲರು ಮಾಡಿದ ಪಾಟೀ ಸವಾಲನ್ನು 3 ರಿಂದ 9, 11 ರಿಂದ 14, 16 ರಿಂದ 20, 22 ರಿಂದ 28, 31 ರಿಂದ 34 ನೇ ಆರೋಪಿತರ ಪರ ವಕೀಲರು ಅಳವಡಿಸಿಕೊಂಡಿರುತ್ತಾರೆ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಚೆನ್ನಪ್ಪ ಗೌಡ)
3 ನೇ ಹೆಚ್ಚುವರಿ ಸತ್ರ ನ್ಯಾಯಾಧೀಶರು, ಬೆಳಗಾವಿ.